# ಸಹೋದರರ ಸವಾಲ್ !



ಯಂತ್ರದ ಮೂಲಕ ಹಾಲು ಹಿಂಡುತ್ತಿರುವುದು

**ಹೈನುಗಾರಿಕೆಯನ್ನು ದೊಡ್ಡ ಮಟ್ಟದಲ್ಲಿ ಆರಂಭಿಸಿ ನಿರ್ವಹಣೆ ಮಾಡಲಾರದೆ ಕೈ ಸುಟ್ಟುಕೊಂಡವರ ನಡುವೆ ಸಣ್ಣ ಮಟ್ಟದಿಂದ ಬೆಳೆಸುತ್ತಾ ಇಂದು ದೊಡ್ಡ ಯಶಸ್ಸು ಪಡೆದಿರುವುದು ವಿಲಿಯಮ್ ಮತ್ತು ರೊನಾಲ್ಡರ ಹೆಗ್ಗಳಿಕೆ.**

ಚಿತ್ರ– ಬರಹ: **ಕೃಷ್ಣ ಪ್ರಶಾಂತ್ ವಿ. ಗೇರುಕಟ್ಟೆ**

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕು ಕರಾಯದ ವಿಲಿಯಮ್ ಮತ್ತು ರೊನಾಲ್ಡ್ ಸಹೋದರರು ಹೈನುಗಾರಿಕೆ ಉದ್ಯಮವನ್ನು ಸಮರ್ಥ–ವಾಗಿ ನಿರ್ವಹಣೆ ಮಾಡಿ ದೊಡ್ಡ ಯಶಸ್ಸು ಗಳಿಸಿದ್ದಾರೆ.

ಹದಿನಾರು ವರ್ಷಗಳ ಹಿಂದೆ ವಿಲಿಯಮ್ ಹೈನುಗಾರಿಕೆ ವೃತ್ತಿಗೆ ಕೈಹಾಕಿದರು. ಮೊದಲಿಗೆ ಹಟ್ಟಿಯಲ್ಲಿದ್ದುದು ಬರೇ ನಾಲ್ಕು ಹಸುಗಳು. ಹೈನುಗಾರಿಕೆ ಲಾಭದಾಯಕ ಎಂದು ತಲೆಗೆ ಹೋಗಿದ್ದೇ ತಡ ಹಸುಗಳ ಸಂಖ್ಯೆಯೂ ಹೆಚ್ಚಿತು. ಇಂದು ಗಿರ್, ಹೆಚ್.ಎಫ್, ಜರ್ಸಿ ಮುಂತಾದ ವಿವಿಧ ತಳಿಯ ಸುಮಾರು 24 ಹಸುಗಳನ್ನು ಹಟ್ಟಿಯಲ್ಲಿ ಸಾಕುತ್ತಿದ್ದಾರೆ.

## ದಿನಕ್ಕೆ 250 ಲೀಟರ್ ಹಾಲು

ಈಗ ದಿನವೊಂದಕ್ಕೆ ಉತ್ಪಾದನೆಯಾಗುವ ಹಾಲು ಸುಮಾರು 250 ಲೀಟರು! ಒಂದೊಮ್ಮೆ ಲೀಟರ್ ಗೆ 7ರೂಪಾಯಿನಂತೆ ಹಾಲು ಮಾರಾಟ ಮಾಡುತ್ತಿದ್ದವರು ಈಗ ಲೀಟರ್‌ಗೆ 34 ರೂಪಾಯಿ ಪಡೆಯುತ್ತಿದ್ದಾರೆ. ವಿದೇಶದಲ್ಲಿ ಕೆಲಸ ಮಾಡುತ್ತಿದ್ದ ವಿಲಿಯಮ್ಮರ ತಮ್ಮ ರೊನಾಲ್ಡ್ ಕೆಲವು ವರ್ಷಗಳ ಹಿಂದೆ ಉದ್ಯೋಗ ತ್ಯಜಿಸಿ ಊರಿಗೆ ವಾಪಸಾದರು. ಅವರೂ ಅಣ್ಣನ ಹಾದಿ ಹಿಡಿದರು. ಈಗ ಉದ್ಯಮವನ್ನು ಮತ್ತಷ್ಟು ವಿಸ್ತಾರಗೊಳಿಸುವಲ್ಲಿ ಶ್ರಮ ವಹಿಸುತ್ತಿದ್ದಾರೆ. ತಮ್ಮ ಊರಿನ ಸಮೀಪದ, ದಕ್ಷಿಣ ಕನ್ನಡದ ತಣ್ಣೀರುಪಂಥ ಹಾಲಿನ ಡೈರಿಗೆ ಪ್ರತಿನಿತ್ಯ 250 ಲೀಟರ್ ಹಾಲು ಕೂಡ ಸಾಗಿಸುತ್ತಾರೆ.

‘ಉತ್ತಮ ಹಾಲು ಉತ್ಪಾದನೆಗೆ ಹಸುಗಳಿಗೆ ಹಸಿರು ಹುಲ್ಲು, ಹಿಂಡಿಯನ್ನು ಉಣಬಡಿಸುವುದರ ಜೊತೆಗೆ ಸಮೃದ್ಧ ಪ್ರೀತಿಯನ್ನು ಧಾರೆಯೆರೆಯಬೇಕು. ಆಗಲೇ ಹೈನುಗಾರಿಕೆಯಲ್ಲಿ ತೃಪ್ತಿ ಸಿಗುವುದು’ ಎನ್ನುತ್ತಾರೆ ವಿಲಿಯಮ್.

ಹಸುಗಳ ಮೇವಿಗಾಗಿ ಮೂರು ಎಕರೆ ಜಾಗದಲ್ಲಿ ಕಸಿ ಹುಲ್ಲನ್ನೂ ಬೆಳೆದಿದ್ದಾರೆ. ಇವುಗಳಿಗೆ ಹಟ್ಟಿಯಿಂದ ಹೋಗಿ ಶೇಖರಣೆಯಾಗುವ ಸ್ಲರಿ–ಯನ್ನು ಗೊಬ್ಬರವಾಗಿ ಬಳಸುತ್ತಾರೆ. ದೊಡ್ಡ ಪಂಪ್ ಅಳವಡಿಸಿ ಅದರ ಮೂಲಕ ಸ್ಲರಿಯನ್ನು ಮೇವಿನ ಹುಲ್ಲಿನ ಕಟಾವು ನಂತರ ಹಾಯಿಸುತ್ತಾರೆ.

ವಿಲಿಯಮ್ ಅವರ ತಮ್ಮ ರೊನಾಲ್ಡ್ ಬೆಳಗೆದ್ದು ತಮ್ಮ 24 ಹಸುಗಳಿಗೆ ಮೇವು ತರಲು ಹೊರಡುತ್ತಾರೆ. ಹೀಗೆ ವ್ಯವಸ್ಥಿತವಾಗಿ ಹೈನುಗಾರಿಕೆಯ ಕಾರ್ಯಗಳು ನಡೆಯತೊಡಗುತ್ತವೆ. ಹಾಲು ಹಿಂಡಲು ಯಂತ್ರವನ್ನೇ ಬಳಸುತ್ತಾರೆ. ಹಾಲು ಕರೆಯುವ ಯಂತ್ರಗಳಿಂದ ಹಸುಗಳಿಗೆ ಯಾವ ಅಪಾಯವೂ ಇಲ್ಲ ಎಂಬುದು ವಿಲಿಯಮ್ ಅಭಿಪ್ರಾಯ.